## ಅದೆನಿತು ಅಂತರ...



ಆ ಬಾನಿಗೂ ಈ ಭೂಮಿಗೂ
ಅದೆನಿತು ಅಂತರ?
ಗಗನಚುಂಬಿ ಗೋಪುರ
ಆಗಿಹುದು ಆಸೆಗಳ ಆಗರ
ಆಸೆಯ ಜೊತೆಗೆ ನಿರಾಸೆ
ಇಹುದೆಂದು ಸಾರುತಿಹುದು
ಅದರ ಅಡಿಯಲ್ಲಿನ ಪ್ರಪಾತ
ನಮಗೆ ಸಾರಿ ಹೇಳುತಿಹುದು
ಬದುಕಿನ ದ್ವಂದ್ವಗಳ ಸಂಕೇತ
ಆಳದ ಕಮರಿಗೆ ಜಿಗಿದು
ಬೀಳುವ ಮುನ್ನ
ತಲೆಯೆತ್ತಿ ನೋಡಿದರೆ
ಆದೀತಲ್ಲವೇ ಬಾಳು ಚೆನ್ನ
ಆಗ ಚಿಗುರೀತು ಅಲ್ಲವೇ
ಬದುಕಿನ ಎಲ್ಲ ಸಮಸ್ಯೆಗಳ
ದಿಟ್ಟತನದಿ ಎದುರಿಸುವ ಛಲ

**ಎಚ್.ಕೆ. ರಾಘವೇಂದ್ರ**

## ಗೋಪುರ... ನೂಪುರ...

ವಿಶ್ವದದ್ಭುತ
ಐಫೆಲ್ ಗೋಪುರ
ಬೆಳೆದು ನಿಂತಿದೆ
ಬಾನೆತ್ತರ...

ಕತ್ತೆತ್ತಿ... ಎತ್ತಿ... ಎತ್ತಿ
ಕಣ್ ಏರತಾವ ನೆತ್ತಿ

ಜಿಂಕೆಜಿಗಿತದ ನಾರಿ
ಒಂದೆ ನೆಗೆತಕೆ ಹಾರಿ
ನೋಟಕರ ಚಿತ್ತ
ಒಮ್ಮೆಗೇ ಹೌ ಹಾರಿ!
ಸ್ಥಬ್ಧವಾಗಿದೆ ದಾರಿ

ನಿಂತಲ್ಲೇ ನಿಂತು
ಪ್ರವಹಿಸದ
ವಾಹನ ಸವಾರಿ

ಗೋಪುರದ ಕೆಳಗೆ
ದೂರದಿಂದಿಳೆಗೆ
ತ್ರಿಶಂಕು ಸ್ಥಿತಿಯಲಿ
ತ್ರಿಪುರ ಸುಂದರಿ

ಹಗಲಗನಸಿಗೆ
ಹೆಗಲ ಕೊಟ್ಟವಳವಳು
ಕುಣಿಯಲೇ ಬೇಕೀಗ
ನೆಲ ಡೊಂಕಾ(ದೂರಾ)ದರೂ!

ಮಧ್ಯಮ ವರ್ಗದ
ಪ್ರತಿರೂಪದಂತಿಹ ಬಾಲೆ
ಉತ್ತಮ ನಿ'ದರ್ಶನ'ವ
ತೋರುತಿಹಳು

ನೂಪುರವೆ ಭೂಮಿ
ಗೋಪುರವೆ ಆಕಾಶ
ನಡುವೆ ನರ್ತನವೆಂದು
ಸಾರುತಿಹಳು

**ನಾರಾಯಣ ರಾಯಚೂರ್**